

## ಕ್ಯಾನನ್ ಬಾಲ್ ಘಮಲು

ಬೆಂಗಳೂರಿನಲ್ಲಿ ಒಂದು ದಿನ ಉದ್ಯಾನದಲ್ಲಿ ಸುತ್ತಾಡಲು ಹೋಗಿದ್ದೆ. ಉದ್ಯಾನದ ಬಳಿಯಿದ್ದ ರಸ್ತೆಯ ಮೇಲೆ ತಿಳಿ ಗುಲಾಬಿ ಹಾಗೂ ಬಿಳಿ ಬಣ್ಣ ಮಿಶ್ರಿತ ಬಣ್ಣದ ಎಸಳುಗಳಿದ್ದ ಹೂವೊಂದು ಬಿದ್ದಿತ್ತು. ಒಂದೇ ನೋಟಕ್ಕೆ ಆಕರ್ಷಿಸಿದ ಆ ಹೂವು ಯಾವುದೆಂದು ನನಗೆ ತಿಳಿಯಲಿಲ್ಲ. ಆದರೆ, ಅದರ ಸುವಾಸನೆಯಂತೂ ಮನಸ್ಸಿಗೆ ಮುದ ನೀಡಿತು.

ತಿಳಿ ಗುಲಾಬಿ ಮತ್ತು ಬಿಳಿ ಮಿಶ್ರಿತ ಬಣ್ಣದ ಎಸಳುಗಳು, ಹೂವಿನ ಮಧ್ಯದಲ್ಲಿ ಶಿವಲಿಂಗಾಕೃತಿ, ಅದರ ಮೇಲ್ಗಡೆ ಹೆಡೆ ಬಿಚ್ಚಿದ ನಾಗದಂತಿದ್ದ ಕೇಸರಿಯ ಗುಚ್ಛ ನೋಡಲು ಬಲು ಸುಂದರವಾಗಿತ್ತು. ಮರದ ಕಾಂಡದಲ್ಲಿ ಈ ಪುಷ್ಪವು ಅರಳಿದ್ದು ವಿಶೇಷವಾಗಿತ್ತು. ಅದರ ಕಾಯಿಗಳು ತೆಂಗಿನ ಕಾಯಿಯಷ್ಟು ದೊಡ್ಡವು. ಮರದ ತುಂಬಾ ಅರಳಿ ನಿಂತಿದ್ದ ಹೂವುಗಳ ಮಧ್ಯೆಯಿದ್ದ ಕೇಸರಿಯನ್ನು ತಂದು ಮನೆಯಲ್ಲಿ ನೀರಿಗೆ ಹಾಕಿದ್ದೆ. ಬೆಳಗಾಗುವ ವೇಳೆಗೆಲ್ಲ ಇಡೀ ಮನೆಯೆಲ್ಲಾ ಸುವಾಸನೆ ಆವರಿಸಿಕೊಂಡಿತ್ತು.

ಇದು ಯಾವ ಹೂವು ಎಂದು ಗೂಗಲ್‌ನಲ್ಲಿ ತಡಕಾಡಿದೆ. ಕೊನೆಗೂ ಇದು 'ಕ್ಯಾನನ್ ಬಾಲ್' ಹೂವು ಎಂದು ತಿಳಿಯಿತು. ಇದರ ತವರೂರು ದಕ್ಷಿಣ ಅಮೆರಿಕದ ಅಮೆಜಾನ್ ಅರಣ್ಯ. 'ಶಿವ, ನಾಗ ದೇವರಿಗೆ ಅತ್ಯಂತ ಪ್ರಿಯವಾದ ಈ ಹೂವಿನ ಮರವನ್ನು ದೇವಾಲಯಗಳಲ್ಲಿ ಹೆಚ್ಚಾಗಿ ಬೆಳೆಸುತ್ತಾರೆ. ಈ ಮರವನ್ನು 'ನಾಗಲಿಂಗ' ಎಂದು ಕೆಲವರು ಕರೆದರೆ ನಾಗ ಸಂಪಿಗೆ ಎಂದೂ ಕೆಲವರು ಹೇಳುತ್ತಾರೆ. ಶಿವರಾತ್ರಿಯ ಸಮಯದಲ್ಲಿ ಗೊಂಚಲು ಗೊಂಚಲಾಗಿ ಅರಳುವ ಈ ಮರದ ವಿವಿಧ ಭಾಗಗಳಲ್ಲಿ ರೋಗ ನಿರೋಧಕ ಶಕ್ತಿಯೂ ಇದೆ' ಎಂಬ ಮಾಹಿತಿಯೂ ಅರಿವಿಗೆ ಬಂತು.

—ಶ್ರುತಿ ಎಸ್., ಬೆಂಗಳೂರು

## ಕಬ್ಬು ಹೊತ್ತ ಟ್ರ್ಯಾಕ್ಟರ್‌ಗೆ ಸಿಂಗಾರ

ಮಂಡ್ಯದ ಮೈಶುಗರ್ ಕಾರ್ಖಾನೆಗೆ ಕಬ್ಬು ಸಾಗಾಣಿಕೆ ಮಾಡುವ ಟ್ರ್ಯಾಕ್ಟರ್‌ಗಳ ಪೈಕಿ ಕೆಲವು ಸಿಂಗಾರಗೊಂಡಿದ್ದದ್ದು ಕಣ್ಣಿಗೆ ಬಿದ್ದವು. ಆಯುಧಪೂಜೆ ಬಂದೇ ಬಿಡ್ತಾ ಅಂದುಕೊಂಡೆ. ಆದರೆ ಇವು ಹಬ್ಬಕ್ಕೆ ಸಿಂಗಾರಗೊಂಡ ಟ್ರ್ಯಾಕ್ಟರ್‌ಗಳಲ್ಲ, ಕಬ್ಬು ಹೊತ್ತು ಹೊಸಪೇಟೆಯಿಂದ ಮಂಡ್ಯಕ್ಕೆ ಬಂದ ಲಂಬಾಣಿ ಸಮುದಾಯದವರಿಗೆ ಸೇರಿದ ಸಾರಥಿಗಳು ಎಂದು ಆಮೇಲೆ ತಿಳಿಯಿತು.

ಲಂಬಾಣಿ ಸಮುದಾಯದ ಮಹಿಳೆಯರು ವಿವಿಧ ರೀತಿಯ ಆಭರಣಗಳನ್ನು ಹಾಗೂ ಕಸೂತಿ ಸೀರೆ ಧರಿಸಿ ವಿಶೇಷವಾಗಿ ಕಾಣಿಸಿಕೊಳ್ಳುತ್ತಾರೆ. ಅದು ಅವರ ಪದ್ಧತಿ. ಅಂತೆಯೇ ಲಂಬಾಣಿ ಸಮುದಾಯದ ಪುರುಷರು ತಮ್ಮ ಟ್ರ್ಯಾಕ್ಟರ್‌ಗಳನ್ನೂ ವಿಶೇಷವಾಗಿ ಸಿಂಗರಿಸುವುದು ವಿಶೇಷ. ವರ್ಷಕ್ಕೊಮ್ಮೆ ಆಯುಧಪೂಜೆಯಂದು ವಾಹನಗಳಿಗೆ ಸಿಂಗಾರ ಮಾಡುವುದು ಸಹಜ. ಅದೇ ರೀತಿ ವರ್ಷವಿಡೀ ಲಂಬಾಣಿ ಸಮುದಾಯದವರು ತಮ್ಮ ಟ್ರ್ಯಾಕ್ಟರ್‌ಗಳಿಗೆ ಪ್ಲಾಸ್ಟಿಕ್‌ನ ವಿವಿಧ ರೀತಿಯ ಆಲಂಕಾರಿಕ ವಸ್ತುಗಳಿಂದ ಸಿಂಗಾರ ಮಾಡುತ್ತಾರೆ. 'ಈಗ ಸಿಂಗಾರ ಮಾಡಿರುವುದು ಕಡಿಮೆ. ಆಯುಧಪೂಜೆಯಂದು ನೀವು ನೋಡಬೇಕು, ದಂಗಾಗಿಬಿಡುತ್ತೀರಿ' ಎಂದು ಅವರ ಪೈಕಿಯೊಬ್ಬರು ಹೇಳಿದರು.

—ಸಿ. ಸಿದ್ದರಾಜು ಆಲಕೆರೆ, ಮಂಡ್ಯ







## 150 ವರ್ಷದ ರೈಲ್ವೆ ನಿಲ್ದಾಣ

ಈಚೆಗೆ ದಕ್ಷಿಣ ಭಾರತದಲ್ಲಿ ಬರುವ ತಮಿಳುನಾಡಿನ ಕೊಯಮತ್ತೂರು ನಗರಕ್ಕೆ ಪ್ರವಾಸಕ್ಕೆಂದು ಹೋಗಿದ್ದೆ. ರಾಯಚೂರಿನಿಂದ ಕೊಯಮತ್ತೂರಿಗೆ ನೇರವಾಗಿ ರೈಲು ಸಂಪರ್ಕವಿದ್ದು, ಅದರಲ್ಲಿಯೇ ಪ್ರಯಾಣ ಬೆಳೆಸಿದೆ. ಕೊಯಮತ್ತೂರು ರೈಲು ನಿಲ್ದಾಣವು ಜಂಕ್ಷನ್ ಆಗಿದ್ದು, ಈ ನಿಲ್ದಾಣಕ್ಕೀಗ 150ರ ಸಂಭ್ರಮ. ಈ ಪ್ರಯುಕ್ತ ಬ್ಯಾನರ್, ಧ್ವನಿವರ್ಧಕಗಳ ಮೂಲಕ ಪ್ರಯಾಣಿಕರಿಗೆ ಮಾಹಿತಿ ಹಂಚುವ ಕೆಲಸವನ್ನು ರೈಲ್ವೆ ಇಲಾಖೆ ಮಾಡುತ್ತಿದೆ. ನಿಲ್ದಾಣದ ಪ್ರವೇಶ ದ್ವಾರದಲ್ಲಿ ಹಳೆಯ ರೈಲು ಎಂಜಿನ್ ನಿಲ್ಲಿಸಿರುವ ರೈಲ್ವೆ ಇಲಾಖೆಯು ಅದರ ಮೇಲೆ 150 ಸಂಭ್ರಮದ ಬಗ್ಗೆ ಮಾಹಿತಿಯುಳ್ಳ ಬ್ಯಾನರ್ ಹಾಕಿದೆ. ದಕ್ಷಿಣ ಭಾರತದ ಮೂರನೇ ಅತ್ಯಂತ ಹಳೆಯ ರೈಲು ನಿಲ್ದಾಣವಾಗಿದೆ.

—ಈರಣ್ಣ ಬೆಂಗಾಲಿ, ರಾಯಚೂರು